

ಹೊಸ ಕೈಗಳಲ್ಲಿ ಕೇಶ ಶೃಂಗಾರ ಮಾಡಿಕೊಳ್ಳುತ್ತಿರುವ ಶ್ರೇಯಾ

ಅದು 2016ನೇ ಇಸವಿ. ನಾನು ಮಣಿಪಾಲದ ಎಂಐಟಿಯಲ್ಲಿ ಎಂಜಿನಿಯರಿಂಗ್ ಓದುತ್ತಿದ್ದೆ. ನನಗಾಗ 18 ವರ್ಷ ವಯಸ್ಸು. ನನ್ನ ವಯಸ್ಸಿನ ಇತರೆಲ್ಲ ಯುವತಿಯರಂತೆ ನನಗೂ ಸಾಕಷ್ಟು ಆಸೆಗಳಿದ್ದವು. ಆದರೆ ಸೆಪ್ಟೆಂಬರ್ 28, 2016ರಂದು ನನ್ನ ಬದುಕು ಅನಿರೀಕ್ಷಿತ, ಅನೂಹ್ಯ ತಿರುವು ಪಡೆದುಕೊಂಡಿತು. ರಜೆ ಇದ್ದ ಕಾರಣ ಪುಣೆಯಲ್ಲಿ ಒಂದು ವಾರ ಇದ್ದ ನಾನು ವೋಲ್ವೊ ಬಸ್‌ನಲ್ಲಿ ಮಣಿಪಾಲಕ್ಕೆ ಹಿಂದಿರುಗುತ್ತಿದ್ದೆ. ಮುಂಜಾನೆ ಸುಮಾರು 5ರ ಸಮಯ. ಚಾಲಕನ ನಿರ್ಲಕ್ಷ್ಯದ ಕಾರಣ ಬಸ್ ಮಗುಚಿಕೊಂಡು, ಸುಮಾರು 100 ಮೀಟರ್ ಹಾಗೆಯೇ ಜಾರಿಕೊಂಡು ಹೋಯಿತು.

ಅಪಘಾತದಿಂದಾಗಿ ನನಗೆ ಸಾಕಷ್ಟು ಗಾಯಗಳಾಗಿದ್ದವು. ನನ್ನ ಬಲಗೈನ ಮುಂಗೈ ಸಂಪೂರ್ಣ ಜಜ್ಜಿ ಹೋಗಿತ್ತು. ಎಡ ಮುಂಗೈನಲ್ಲಿ ಮಾಂಸ ಮತ್ತು ಚರ್ಮ ಜೋತು ಬಿದ್ದಿತ್ತು. ನನ್ನ ಬಲ ಮೊಳಕಾಲು ಮತ್ತು ಹೊಟ್ಟೆಗೂ ಗಾಯಗಳಾಗಿದ್ದವು. ಚರ್ಮ ಸುಲಿದು ಬಂದಿತ್ತು. ಗಲ್ಲ ಮತ್ತು ಮುಖದಿಂದ ರಕ್ತ ಸುರಿಯುತ್ತಿತ್ತು. ತಲೆಗೂ ಪೆಟ್ಟು ಬಿದ್ದಿತ್ತು.

ಈಗ ಆ ಅಪಘಾತದ ಬಗ್ಗೆ ಬರೆಯುವಾಗ ಅಷ್ಟೇನು ಬೇಸರವಾಗುತ್ತಿಲ್ಲ ಎನ್ನುವುದು ನನಗೂ ಅಚ್ಚರಿ ಮೂಡಿಸುತ್ತದೆ. ಅಪಘಾತವಾದ ತಕ್ಷಣ ನನ್ನನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ಕರೆತಂದರು. ಅಪಘಾತದ ತೀವ್ರತೆ ಹೆಚ್ಚಾಗಿದ್ದ ಕಾರಣ ವೈದ್ಯರಿಗೆ ನನ್ನ ಮುಂಗೈಗಳನ್ನು ಉಳಿಸಲು ಸಾಧ್ಯವಾಗಲಿಲ್ಲ. ಎರಡು ದಿನಗಳು ಕಳೆದ ನಂತರ ನನ್ನ ಕೈಗಳನ್ನು ತೆಗೆಯಲಾಗಿದೆ ಎಂದು ನನ್ನ ಪೋಷಕರು ಹೇಳಿದರು. ನಾನಾಗ ಇನ್ನೂ ಐಸಿಯುನಲ್ಲಿದ್ದೆ. ಕೈಗಳಿಲ್ಲ ಎಂಬ ಸಂಗತಿ ತಿಳಿದು ಆಘಾತಕ್ಕೊಳಗಾದೆ.

ನಿಜ ಹೇಳಬೇಕು ಅಂದ್ರೆ, ನನಗೆ ಆಗ ಹೇಗೆ ರಿಯಾಕ್ಟ್ ಮಾಡಬೇಕು, ಏನು ಹೇಳಬೇಕು ಅಂತ ಗೊತ್ತಾಗಲಿಲ್ಲ. ನಮ್ಮ ಮುಂದೆ ಒಂದಿಷ್ಟು ಆಯ್ಕೆಗಳಿವೆ. ನಾನು ಮತ್ತೆ ಸ್ವತಂತ್ರಳಾಗಲು ಏನೆಲ್ಲಾ ಮಾಡಲು ಸಾಧ್ಯವೋ ಅವೆಲ್ಲವನ್ನೂ ಮಾಡುತ್ತೇವೆ ಎಂದು ನನ್ನ ಪೋಷಕರು ಭರವಸೆ ನೀಡಿದರು. ಕೆಲವು ದಿನಗಳ ನಂತರ ನನ್ನ ಕೈಗಳ ಅಳಿದುಳಿದ ಭಾಗಗಳನ್ನು ಒಮ್ಮೆ ಗಮನಿಸಿದೆ. ಅದು ಸಂಪೂರ್ಣ ಕಪ್ಪಾಗಿತ್ತು. ಕೆಲವು ಭಾಗಗಳಿಂದ ಚರ್ಮ ಸುಲಿದುಬರುತ್ತಿತ್ತು. ರಕ್ತ ತೊಟ್ಟಿಕ್ಕುತ್ತಿತ್ತು. ಅದು ನಿಜಕ್ಕೂ ಭೀಕರ ದೃಶ್ಯ.

ಬದುಕಿನ ವಾಸ್ತವ ನನ್ನ ಮುಖಕ್ಕೆ ಗುದ್ದಿತ್ತು. ನಾನು ಎಂದೂ ಊಹಿಸದ ರೀತಿಯ ಬದುಕಿಗೆ ಪಾತಳಿಗೆ ಬಂದು ಬಿದ್ದಿದ್ದೆ. ಎರಡೂ ಮುಂಗೈ ಕಳೆದುಕೊಂಡಿದ್ದ ವಿಚಾರ ನನ್ನ ಬದುಕನ್ನು ಇಡಿಯಾಗಿ ಬದಲಿಸಿತ್ತು. ನಾನು ಅಕ್ಷರಶಃ ಪರಿಸ್ಥಿತಿಯ ಕೈಗೊಂಬೆಯಾಗಿದ್ದೆ.

ಬದುಕಿನ ತೀರಾ ಖಾಸಗಿ ಅಗತ್ಯಗಳಿಗೂ ನಾನು ಇನ್ನೊಬ್ಬರ ಮೇಲೆ ಅವಲಂಬಿತಳಾಗಿದ್ದೆ. ಶೌಚಾಲಯಕ್ಕೆ ಹೋಗುವುದು, ಮುಖ ತೊಳೆಯುವುದಕ್ಕೂ ಇನ್ನೊಬ್ಬರ ಸಹಾಯ ಬೇಕಾಗುತ್ತಿತ್ತು. ಉಸಿರಾಟ, ಆಹಾರ ನುಂಗುವುದು ಮತ್ತು ನಡೆದಾಡುವುದು ಹೊರತುಪಡಿಸಿ ಉಳಿದ ಯಾವುದನ್ನೂ ನನಗೆ ಸ್ವತಂತ್ರವಾಗಿ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಮಗಳನ್ನು ಸಮಾಧಾನಪಡಿಸಲು ಏನು ಬೇಕಾದರೂ ಮಾಡಲು ಅಮ್ಮ ಸಿದ್ಧವಿದ್ದರು. ಆ ವಿಚಾರದಲ್ಲಿ ನಾನು ಅದೃಷ್ಟವಂತೆ. ಆದರೂ ನನ್ನ ಮನಸ್ಸು ಕುಸಿದಿತ್ತು. ಭವಿಷ್ಯ ಏನಾಗುತ್ತೋ ಎಂಬ ಚಿಂತೆ ಬಾಧಿಸುತ್ತಿತ್ತು. 'ನನಗೇ ಯಾಕೆ ಹೀಗಾಯ್ತು?' ಎಂದು ಅಮ್ಮನನ್ನು ಹಲವು ಸಲ ಕೇಳಿದ್ದೆ. 'ನಿನಗೆ ಕಷ್ಟಗಳನ್ನು ಎದುರಿಸುವ ಸಾಮರ್ಥ್ಯವಿದೆ. ನೀನು ಅಷ್ಟು ಗಟ್ಟಿಯಾಗಿದ್ದಿ, ಎನ್ನುವ ಕಾರಣಕ್ಕೆ ನಿನಗೆ ಇಷ್ಟೆಲ್ಲಾ ಆಗಿದೆ. ನೀನಲ್ಲದೆ ಇನ್ಯಾರು ಇಷ್ಟೆಲ್ಲಾ ಕಷ್ಟ ಎದುರಿಸಿ ಗೆಲ್ಲಬಲ್ಲರೋ ನನಗೆ ಗೊತ್ತಿಲ್ಲ' ಎಂದು ಅಮ್ಮ ಉತ್ತರಿಸಿದ್ದರು. ಸೋಲುವುದು ನನ್ನೆದುರಿನ ಆಯ್ಕೆಯಲ್ಲ ಎಂದು ಆಗ ನನಗೆ ಅರ್ಥವಾಯಿತು.

ನೀವು ಅತ್ಯಂತ ದುಃಖದ ಸನ್ನಿವೇಶದಲ್ಲಿದ್ದಾಗ ಏನಾದರೂ ಒಳ್ಳೇದು ಆಗುತ್ತೆ ಅಂತ ಕಾಯುವ ಹೃದಯವೊಂದು ನಿಮ್ಮಲ್ಲಿ ಸದಾ ಮಿಡಿಯುತ್ತಿರಬೇಕು. ನಾನು ಮುಂಗೈಗಳನ್ನು ಕಳೆದುಕೊಂಡಿರಬಹುದು. ಆದರೆ ನನಗೆ ಕಾಲುಗಳಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ನನ್ನ ಇಚ್ಛಾಶಕ್ತಿ ಜೀವಂತವಾಗಿತ್ತು. ಕಾಲಿನಿಂದ ಫೋನ್, ಲ್ಯಾಪ್‌ಟಾಪ್, ಕಿಂಡಲ್ ಮತ್ತು ಟೀವಿ ರಿಮೋಟ್ ಬಳಸುವುದನ್ನು ಕಲಿತುಕೊಂಡೆ. ಕೃತಕ ಕೈಗಳನ್ನು ಅಳವಡಿಸಿಕೊಂಡು, ಬಳಸುವುದನ್ನು ಕಲಿತೆ. ಮೆಕಾನಿಕಲ್ ಮತ್ತು ಬ್ಯಾಟರಿ ಚಾಲಿತ ಕೈಗಳ ಬಳಕೆಗೆ ಯತ್ನಿಸಿದೆ. ನನಗೆ ಅವನ್ನು ಬಳಸುವುದು ಹಿಂಸೆ ಎನಿಸುತ್ತಿತ್ತು. ಅವು ತುಂಬಾ ಭಾರವಾಗಿದ್ದವು, ಒರಟಾಗಿದ್ದವು, ಹಲವು ಹುಕ್ ಮತ್ತು ಬೆಲ್ಟ್‌ಗಳಿದ್ದವು. ಮುಂದಿನ ಬದುಕಿನ 40 50 ವರ್ಷಗಳನ್ನು ಹೀಗೆ ಬೇರೆ ಯಾರೋ ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಾ ಬದುಕುವುದು ನನಗಂತೂ ಇಷ್ಟವಿರಲಿಲ್ಲ.

